ಬಗ್ಗೆ ತಾವು ಏನೇನು ಮಾಹಿತಿ ಪಡೆದುಕೊಂಡಿದ್ದೀರಿ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು.

ಅಧ್ಯಕ್ಷರು : ಎಲ್ಲರೂ ಕೇಳುವುದಕ್ಕೆ ನಿಂತರೆ ಹೇಗೆ ಒಂದು ಗಂಟೆಯ ಒಳಗಡೆ ನಾನು ಪ್ರಶ್ನೋತ್ತರ ವೇಳೆಯನ್ನು ಮುಗಿಸಬೇಕು. ಇದರ ಬಗ್ಗೆ ಬಹಳ ಜನ ಮಾತನಾಡುವುದಕ್ಕೆ ಇಷ್ಟ ಪಡುತ್ತಿರುವುದರಿಂದ ಅದನ್ನು ನಾನು ಅರ್ಧ ಗಂಟೆ ಚರ್ಚೆಗೆ ಒಳಪಡಿಸುತ್ತೇನೆ. ಏಕೆಂದರೆ, ಒಂದು ಗಂಟೆಯ ಒಳಗೆ ಪ್ರಶ್ನೋತ್ತರ ಅವಧಿ ಮುಗಿಯಬೇಕು. ಈ ಪ್ರಶ್ನೆಯನ್ನು ಅರ್ಧ ಗಂಟೆ ಚರ್ಚೆಗೆ ಬಳಸೋಣ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಶಿವರಾಜ್ ಪಾಟೀಲ್ ಸಾಹೇಬರು ಪತ್ರ ಬರೆದ ಸಮಯದಲ್ಲಿ ಇವರು ಮುಖ್ಯ ಮಂತ್ರಿಗಳಾಗಿರಲಿಲ್ಲ. ಮಾನ್ಯ ಧರ್ಮ ಸಿಂಗ್‌ರವರು ಮುಖ್ಯ ಮಂತ್ರಿಗಳಾಗಿದ್ದರು.

ಅಧ್ಯಕ್ಷರು : ನಾನು ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಶಾಲಾ ಮಕ್ಕಳಿಗೆ ಹಂಚುವ ಆಹಾರ ಧಾನ್ಯ ದುರುಪಯೋಗದ ಪುನರ್ ವಿಚಾರಣೆ.

(2)(4) ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾಮಕ್ಕಳಿಗೆ ಹಂಚುವ ಆಹಾರಧಾನ್ಯವನ್ನು ಶಾಲಾ ಮಕ್ಕಳಿಗಾಗಿ ಹಂಚದೇ ಆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಕಾರ್ಯದರ್ಶಿ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಪುನರ್ ವಿಚಾರಣೆ ಮಾಡಿ ಕ್ರಮ ಕೈಗೊಳ್ಳ ಲಾಗಿದೆಯೇ;

2) ಪುನರ್ ವಿಚಾರಣೆ ಮಾಡಿದ್ದರೆ ಅವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಕ್ರಮ ಕೈಗೊಳ್ಳದಿದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

1) ಹೌದು.

2) ಕನಾಟಕ ಕೇಂದ್ರ ಸಹಕಾರ ಬ್ಯಾಂಕಿನ (ಕೆ.ಸಿ.ಸಿ.ಬ್ಯಾಂಕ್) ಸಾಮಾನ್ಯ ಪದವ್ಯಂದ ಸಮಿತಿಯು ಸದರಿ ಕಾರ್ಯದರ್ಶಿಯ ಅಮಾನತ್ತು ಅವಧಿಯನ್ನು ವೇತನ ರಹಿತ ರಜೆಯೆಂಬುದಾಗಿ ಪರಿಗಣಿಸಿದೆ. ಗದಗ್ ಜಿಲ್ಲಾಧಿಕಾರಿಯವರು ಸದರಿ ಕಾರ್ಯದರ್ಶಿಯವರಿಂದ ರೂ, 29,358/– ರಷ್ಟು ಮೌಲ್ಯದ ಅಕ್ಕಿ

ದುರುಪಯೋಗವಾಗಿದೆ ಎಂದು ಹಾಗೂ ಅವರಿಂದ ವಸೂಲಿ ಮಾಡಬೇಕೆಂದು ಆದೇಶ ಹೊರಡಿಸಿರುತ್ತಾರೆ. ಇತ್ತೀಚೆಗೆ ಈ ವಿಷಯ ಸಹಕರ ಇಲಾಖೆಯ ಗಮನಕ್ಕೆ ಬಂದಿದ್ದು, ಈ ಬಗ್ಗೆ ವಿಳಂಬವಿಲ್ಲದೆ ಕ್ರಮ ಜರುಗಿಸ ಲಾಗುವುದು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಿ ಮಂತ್ರಿಗಳು ಉತ್ತರ ಒದಗಿಸಿದ್ದಾರೆ ನಾನು ಒಮ್ಮೆ ಮಾನ್ಯ ದೇಶಪಾಂಡೆಯವರಿಗೆ ಇದೇ ಪ್ರಶ್ನೆ ಕೇಳಿದಾಗ ಅದು ದುರುಪಯೋಗವಾಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಪುನಃ ನಾನು ಅಸೆಂಬ್ಲಿಯಲ್ಲಿ ಎಲ್ಲಾ ಮಾಹಿತಿ ಕೊಟ್ಟ ಮೇಲೆ ಇವರು ಚೌಕಾಸಿ ಮಾಡಿ ಎಂದು ಹೇಳಿದರು. ಚೌಕಾಸಿ ಮಾಡಲಿಲ್ಲ. ಅವರು ಉತ್ತರ ಕೊಡುತ್ತಾರೆ. ದುರುಪಯೋಗವಾಗಿದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನಾವು ಬರೆದ ಕೂಡಲೇ ಇಡೀ ಊರ ಜನ ಬಿಸಿ ಊಟವನ್ನು ಬಂದ್ ಮಾಡಿದರು. ಆ ಸೆಕ್ರೆಟರಿ ಮಾರುತ್ತಿದ್ದಾರೆ. ಆ ಸೆಕ್ರೆಟರಿ ಮೇಲೆ ಏನೂ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ ಸಸ್ಪೆಂಡ್ ಮಾಡಿದ ಹಾಗೆ ಮಾಡಿ, ಯೂನಿಯನ್‌ನಿಂದ ವರದಿ ಒಪ್ಪಿಸಿ ಸುಳ್ಳು ಇದು ಆಗಿಲ್ಲ ಎಂದು ಉತ್ತರ ಕೊಡಿಸಿದರು. ಈ ಸಾರಿ ದುರುಪಯೋಗವಾಗಿದೆ, ಕ್ರಮ ತೆಗೆದು ಕೊಳ್ಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ, ಏನು ಕ್ರಮ ತೆಗೆದುಕೊಳ್ಳುತ್ತೀರಿ, ದುರುಪಯೋಗ ಮಾಡಿದರೆ ಡಿಸ್‌ಮಿಸ್ ಮಾಡುವೆ ಸುಳ್ಳು ವರದಿ ಕೊಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ಜಿಲ್ಲಾಧಿಕಾರಿಯವರು ಗದಗ್ ಜಿಲ್ಲೆ ಒಟ್ಟು 19.92 ಕ್ವಿಂಟಾಲ್ ಅಕ್ಕಿ ದುರುಪಯೋಗ ಆಗಿದೆ, ಹಾಗೂ 12.70 ಕ್ವಿಂಟಾಲ್ ಅಕ್ಕಿ ಸುರಕ್ಷಿತವಾಗಿದೆ. ಸುರಕ್ಷಿತವಾಗಿ ಇಟ್ಟು ಕೊಂಡಿರತಕ್ಕಂಥದ್ದು ಹಾಳಾಗಿದೆ. ಇದರ ಮೌಲ್ಯ 29,358 ರೂಪಾಯಿಗಳು ಸಂಘದ ಕಾರ್ಯದರ್ಶಿಯವರ ಮೇಲೆ ಜವಾಬ್ದಾರಿ ಹೊರಿಸಿ ಅವರಿಂದ ಈ ಹಣವನ್ನು ವಸೂಲಿ ಮಾಡಬೇಕೆಂದು ಆದೇಶ ಮಾಡಿದ್ದಾರೆ. ತಾವು ಈಗಾಗಲೇ ಹೇಳಿದ ಹಾಗೆ ಹಿಂದಿನ ಸಹಕಾರಿ ಸಚಿವರು ಏನು ಉತ್ತರವನ್ನು ಕೊಟ್ಟದ್ದರು ಅದನ್ನೆಲ್ಲಾ ತಾವು ಗಮನಕ್ಕೆ ತಂದಿದ್ದೀರಿ, ಈ ವಿಷಯದಲ್ಲಿ ಹಲವಾರು ರೀತಿಯ ತನಿಖೆಗಳು ಆಗಿವೆ. ಅಂತಿಮವಾಗಿ ಜಿಲ್ಲಾಧಿಕಾರಿಗಳು ಸಹಕಾರಿ ಇಲಾಖೆಗೆ ಕೊಟ್ಟಿರತಕ್ಕಂಥ ವರದಿ ಮೇಲೆ ಏನು ಈಗ ಈ ವಿಷಯ ಬಂದಿದೆ, ಈ ವಿಷಯದಲ್ಲಿ ಜರೂರಾಗಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.